# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :55 ಫ್ರಾ.ಸಾ. : 23**

| | | |
|---|---|---|
| ಸಾಕ್ಷಿಯ ಹೆಸರು | : | ಹರ್ಷ ಶೆಟ್ಟಿಗಾರ |
| ತಂದೆಯ ಹೆಸರು | : | ಚಂದ್ರಶೇಖರ ಶೆಟ್ಟಿಗಾರ |
| ವಯಸ್ಸು | : | 37 ವರ್ಷ |
| ಕೆಲಸ | : | ಯೋಜನಾ ವ್ಯವಸ್ಥಾಪಕ, ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ |
| ವಾಸ | : | ಕಾರವಾರ |

**ದಿನಾಂಕಃ 15-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ದಿಃ17-08-2015 ರಿಂದ ಇಲ್ಲಿಯವರೆಗೆ ನಾನು ಕಾರವಾರದ ಜಿಲ್ಲಾ ನಿರ್ಮಿತಿ ಕೇಂದ್ರದಲ್ಲಿ ಯೋಜನಾ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ಜಿಲ್ಲಾ ನಿರ್ಮಿತಿ ಕೇಂದ್ರಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ದಿಃ 15-12-2018 ರಂದು ಸಿ.ಪಿ.ಐ., ಕಾರವಾರ ರವರು ಒಂದು ಕೋರಿಕೆ ಪತ್ರ ನೀಡಿ, ಅದರಲ್ಲಿ 1) ಕಾರವಾರದ ರಾಕ್ ಗಾರ್ಡನ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಾರವಾರದ ಶಿಪ್ಪಿಂಗ್ ಏಜೆನ್ಸಿಗೆ ಕಲ್ಲುಗಳನ್ನು ಪೂರೈಸಲು ಅಥವಾ ಬೇರೆ ಯಾವುದಾದರೂ ಕೆಲಸ ಮಂಜೂರು ಆಗಿತ್ತಾ? ಎಂಬ ಬಗ್ಗೆ ಮಾಹಿತಿ ನೀಡುವಂತೆ ಹಾಗೂ ಒಂದು ವೇಳೆ ಮಂಜೂರು ಆಗಿದ್ದರೆ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪೂರೈಸುವಂತೆ ಹಾಗೂ 2) ಕಾರವಾರದ ರಾಕ್ ಗಾರ್ಡನ್ ನಿರ್ಮಿಸುತ್ತಿರುವ ಸಂಬಂಧ ಶ್ರೀ ಬಿ.ಎಸ್.ಪೈ ವಕೀಲರು ಏನಾದರೂ ತಕಾರಾರು ಸಲ್ಲಿಸಿದ್ದರಾ ಎಂಬ ಮಾಹಿತಿ ನೀಡುವ ಬಗ್ಗೆ, ಒಂದು ವೇಳೆ ಸಲ್ಲಿಸಿದ್ದರೆ ಅದರ ದಾಖಲಾತಿಗಳನ್ನು ಹಾಗೂ ವಿಲೇವಾರಿ ಮತ್ತು ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡುವಂತೆ ಕೋರಿಕೊಂಡಿರುತ್ತಾರೆ.

2. ಕೋರಿಕೆ ಪತ್ರ ಬಂದ ನಂತರ ನಾನು ನಮ್ಮ ಕಚೇರಿಯ ದಾಖಲೆಗಳನ್ನು ಪರಿಶೀಲಿಸಿ, ದಿಃ 22-12-2018 ರಂದು ಪತ್ರ ಮುಖೇನ ಸಿ.ಪಿ.ಐ., ಕಾರವಾರ ರವರಿಗೆ 1 ನೇ ಪ್ರಶ್ನೆಗೆ

ಮಾಹಿತಿ ಹಾಗೂ ದಾಖಲೆಗಳನ್ನು ನೀಡಿರುತ್ತೇನೆ ಹಾಗೂ 2 ನೇ ಪ್ರಶ್ನೆಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ತಿಳಿಸಿರುತ್ತೇನೆ.

**ಸರಕಾರಿ ಅಭಿಯೋಜಕರು ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*ಸಹಿ ಇದೆ.*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ